# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಶಿವಮೊಗ್ಗದ ಬಜರಂಗದಳದ ಯುವ ಕಾರ್ಯಕರ್ತ ಹರ್ಷ ಹಿಂದೂ ಅವರ ಹತ್ಯೆಯನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ ಹಾಗು ಹಿಂದೂ ಜಾಗರಣ ವೇದಿಕೆಯ ವತಿಯಿಂದ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆ.


ಸಂಪುಟ : 43 ಸಂಚಿಕೆ : 15 ಪ್ಲವ – ಫಾಲ್ಗುಣ ಕಲಿಯುಗಾಬ್ದ 5123 15–03–2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ರಷ್ಯಾ ಉಕ್ರೇನ್ ಯುದ್ಧ: ಏನು ಎತ್ತ?

ಇತ್ತೀಚಿನ ಕೆಲವು ದಿನಗಳಿಂದ ಸುದ್ದಿಯಲ್ಲಿರುವುದು ರಷ್ಯಾ ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧ. ಪ್ರಪಂಚದ ಯಾವುದೇ ದೇಶದಲ್ಲಿ ಯುದ್ಧ ನಡೆದರೂ, ಇತರ ದೇಶಗಳ ಮೇಲೆ ಸ್ವಲ್ಪ ಪರಿಣಾಮ ಆಗಿಯೇ ಆಗುತ್ತದೆ. ಯಾಕೆಂದರೆ, ಎಲ್ಲ ದೇಶಗಳೂ ಇತರ ದೇಶಗಳ ಜೊತೆ ಕೊಡು–ಕೊಳ್ಳುವಿಕೆಯ ಸಂಬಂಧ ಹೊಂದಿರುತ್ತವೆ. ಹಾಗೆಯೇ, ರಕ್ಷಣಾ ವ್ಯವಸ್ಥೆಯ ದೃಷ್ಟಿಯಿಂದ ಪ್ರತಿಯೊಂದು ಯುದ್ಧದಿಂದಲೂ ಇತರ ದೇಶಗಳ ಸೈನ್ಯಗಳೂ ಕಲಿಯುವ ಅಂಶಗಳು ಬಹಳಷ್ಟು ಇರುತ್ತವೆ. ಭಾರತದ ಮೇಲೂ ಈ ಯುದ್ಧದ ಪರಿಣಾಮ ಪರೋಕ್ಷವಾಗಿ ಇದ್ದೇ ಇದೆ. ಹಾಗಾಗಿ, ಇದರ ಹಿನ್ನೆಲೆ ಹಾಗೂ ಪರಿಣಾಮಗಳನ್ನು ಸ್ವಲ್ಪ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

### ಯುದ್ಧಕ್ಕೆ ಕಾರಣವೇನು?

ಉಕ್ರೇನ್ ಎಂಬ ದೇಶ ಮೊದಲು ಸೋವಿಯತ್ ಯೂನಿಯನ್ ಇದ್ದಾಗ ಅದರ ಭಾಗವಾಗಿದ್ದ ಪ್ರದೇಶ. 1991ರಲ್ಲಿ ಕಮ್ಯುನಿಸಂ ಪತನವಾಗಿ ಸೋವಿಯತ್ ಯೂನಿಯನ್ ಒಡೆದು ಚೂರಾದ ಬಳಿಕ ಉಕ್ರೇನ್ ಪ್ರತ್ಯೇಕ ರಾಷ್ಟ್ರವಾಯಿತು. ರಷ್ಯಾದಲ್ಲಿ ಕಮ್ಯುನಿಸಂ ಬರುವ ಮೊದಲೂ ಈಗಿನ ಉಕ್ರೇನಿನ ಕೆಲವು ಭಾಗ ಆಸ್ಟ್ರಿಯಾದಲ್ಲೂ, ಕೆಲವು ಭಾಗ ರಷ್ಯಾದಲ್ಲೂ ಇತ್ತು. ಸಾಂಸ್ಕೃತಿಕವಾಗಿ ಪ್ರತ್ಯೇಕ ಅಸ್ಮಿತೆ ಹೊಂದಿದ್ದ ಉಕ್ರೇನ್ ತನ್ನ ಸ್ವತಂತ್ರ ಅಸ್ತಿತ್ವಕ್ಕಾಗಿ ಪ್ರಯತ್ನ ನಡೆಸಿದ್ದರೂ ಅದು ಯಶಸ್ವಿಯಾಗಿರಲಿಲ್ಲ. 1991ರಲ್ಲೇ ಅದು ಯಶಸ್ವಿಯಾಗಿ ಸ್ವತಂತ್ರ ರಾಷ್ಟ್ರವಾಗಿದ್ದು. ಆ ಬಳಿಕವೂ ಉಕ್ರೇನಿನ ಕೆಲವು ಭಾಗಗಳಲ್ಲಿ ರಷ್ಯನ್ ಮಾತನಾಡುವ ಜನರಿದ್ದು ಅವರ ಒಲವು ರಷ್ಯಾದೆಡೆಗೆ ಇದ್ದದ್ದು ಸುಳ್ಳಲ್ಲ. ಹಾಗಾಗಿ, 2014ರಲ್ಲಿ ಅಂತಹ ಒಂದು ಪ್ರದೇಶವಾದ ಕ್ರೈಮಿಯಾವನ್ನು ರಷ್ಯಾ ವಶಪಡಿಸಿಕೊಂಡಿತು. ಆ ಬಳಿಕ ಉಕ್ರೇನಿಗೆ ಬಲಿಷ್ಠ ರಷ್ಯಾವನ್ನು ಎದುರಿಸಲು ತಾನು ನ್ಯಾಟೋ ಸೇರಬೇಕೆಂಬ ಬಯಕೆ ಬಲವಾಯಿತು. ಅದಕ್ಕೆ ಸ್ವಲ್ಪ ಜನಬೆಂಬಲವೂ ದೊರೆಯಿತು. (ನ್ಯಾಟೋ ಎಂದರೆ, ಅಮೇರಿಕಾ ಕೆನಡಾ ಹಾಗೂ ಯುರೋಪಿನ 28 ದೇಶಗಳ ನಡುವಿನ ಮಿಲಿಟರಿ ಸಹಕಾರಕ್ಕಾಗಿನ ಒಪ್ಪಂದ). ಇತ್ತೀಚೆಗೆ ಅದು ಕಾರ್ಯರೂಪಕ್ಕೆ ಬರುವ ಸಾಧ್ಯತೆ ಕಂಡದ್ದರಿಂದ ರಷ್ಯಾಕ್ಕೆ ಇದರ ಅಪಾಯದ ಅರಿವಾಯಿತು. ಹಾಗಾಗಿ, ಉಕ್ರೇನ್ ನ್ಯಾಟೋ ಸೇರುವುದಕ್ಕೆ ತನ್ನ ವಿರೋಧ ವ್ಯಕ್ತಪಡಿಸಿತು. ಒಂದು ವೇಳೆ ಉಕ್ರೇನ್ ನ್ಯಾಟೋ ಸೇರಿದರೆ, ಅಮೇರಿಕಾ, ಇಂಗ್ಲೆಂಡ್ ಮೊದಲಾದ ದೇಶಗಳ ಸೈನ್ಯಗಳು ಉಕ್ರೇನಿಗೆ ಬಂದು ರಷ್ಯಾದ ಗಡಿಯವರೆಗೂ ಬರಬಹುದು. ತನ್ನ ಗಡಿಯವರೆಗೂ ಇನ್ನೊಂದು ಬಲಿಷ್ಠ ಸೈನ್ಯವನ್ನು ಬಿಟ್ಟುಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಆದ್ದರಿಂದ ರಷ್ಯಾ ಉಕ್ರೇನಿಗೆ ಎಚ್ಚರಿಕೆ ಕೊಟ್ಟಿತು. ಇದನ್ನು ಉಕ್ರೇನ್ ಗಂಭೀರವಾಗಿ ಪರಿಗಣಿಸಲಿಲ್ಲ. ಜೊತೆಗೆ, ನ್ಯಾಟೋ ಕೂಡ ಉಕ್ರೇನಿಗೆ ಸದಸ್ಯತ್ವ ಕೊಡುವುದಕ್ಕೆ ಒಂದು ಹೆಜ್ಜೆ ಹಿಂದಿನದ್ದು ಎನ್ನಬಹುದಾದ ಮೆಂಬರ್‌ಶಿಪ್ ಆಕ್ಷನ್ ಪ್ಲಾನ್ ಪ್ರಾರಂಭಿಸಿತು. ಹಾಗಾಗಿ, ರಷ್ಯಾ ಉಕ್ರೇನಿನ ಮೇಲೆ ಧಾಳಿ ಪ್ರಾರಂಭಿಸಿತು. ಇವಿಷ್ಟು ಯುದ್ಧದ ಹಿನ್ನೆಲೆ.

### ಯುದ್ಧದಲ್ಲಿ ಗೆಲುವು ಯಾರದಾಗಬಹುದು?

ಪ್ರಾರಂಭದಲ್ಲಿ ತಾವೆಲ್ಲ ಬೆಂಬಲ ಕೊಡುವುದಾಗಿ ಹೇಳಿದರೂ, ಪ್ರತ್ಯಕ್ಷ ಯುದ್ಧ ಪ್ರಾರಂಭವಾದಾಗ ಯಾವ ನ್ಯಾಟೋ ದೇಶಗಳೂ ಸಹಾಯಕ್ಕೆ ಸೈನ್ಯ ಕಳುಹಿಸಲಿಲ್ಲ. ಜರ್ಮನಿ ಮಾತ್ರ ಯುದ್ಧೋಪಕರಣ ನೀಡಿದ ಸುದ್ದಿ ಬಂದಿದೆ. ಅಮೇರಿಕಾವಂತೂ ತಾನು ಉಕ್ರೇನಿನ ನೆಲಕ್ಕೆ ತನ್ನ ಸೈನ್ಯ ಕಳುಹಿಸುವುದಿಲ್ಲ ಎಂದು ಹೇಳಿದ್ದು ಉಕ್ರೇನಿಗೆ ದೊಡ್ಡ ಆಘಾತವನ್ನೇ ಒಡ್ಡಿತು. ಈಗಾಗಲೇ, ಯುದ್ಧದಲ್ಲಿ ಸಾಕಷ್ಟು ನಷ್ಟ ಅನುಭವಿಸಿರುವ ಉಕ್ರೇನ್ ಒಂದೋ ಶರಣಾಗಬಹುದು ಅಥವಾ ಪೂರ್ತಿ ಸೋಲುವವರೆಗೂ ಹೋರಾಡಬಹುದು. ಕದನವಿರಾಮದ ಮಾತುಕತೆ ನಡೆಯುತ್ತಿದೆಯಾದರೂ ಎರಡೂ ಪಕ್ಷದವರು ತಮ್ಮ ಪಟ್ಟು ಸಡಿಲಿಸದಿರುವುದರಿಂದ ಹೆಚ್ಚೇನೂ ಪರಿಣಾಮ ಕಂಡುಬರುತ್ತಿಲ್ಲ.

### ಭಾರತದ ಮೇಲೆ ಏನು ಪರಿಣಾಮ?

ಎಲ್ಲ ದೇಶಗಳ ಮೇಲೆ ಆದಂತೆ ಭದಾರತದ ಮೇಲೂ ತೈಲ ಬೆಲೆಯೇರಿಕೆಯ ಪರಿಣಾಮವಾಗಲಿದೆ. ರಷ್ಯಾ ಹಾಗೂ ಉಕ್ರೇನ್ ಎರಡೂ ದೇಶಗಳ ಜೊತೆ ಆಮದು ರಫ್ತು ಇದೆಯಾದ್ದರಿಂದ ಅದರ ಮೇಲೆ ಸ್ವಲ್ಪ ಪರಿಣಾಮವಾಗಲಿದೆ. ಅನೇಕ ದೇಶಗಳು ರಷ್ಯಾದ ಮೇಲೆ ವ್ಯಾಪಾರ ನಿರ್ಬಂಧ ಹೇರಿದರೂ, ಭಾರತ ಮಾತ್ರ ಹಾಗೆ ಮಾಡಲಿಲ್ಲ. ರಷ್ಯಾ ಭಾರತದ ದೀರ್ಘಕಾಲೀನ ಮಿತ್ರ. ಮಾತ್ರವಲ್ಲ, ಪೋಖರಣ್ ಅಣ್ವಸ್ತ್ರ ಪರೀಕ್ಷೆಯ ಬಳಿಕ ಅಮೇರಿಕಾ ನಿರ್ಬಂಧ ಹೇರಿದಾದ ನಮಗೆ ತಂತ್ರಜ್ಞಾನ ಕೊಟ್ಟು ಸಹಕರಿಸಿದ ದೇಶ. ಈಗಲೂ ಅನೇಕ ಪ್ರಮುಖ




ರಕ್ಷಣಾ ಉಪಕರಣಗಳನ್ನು ಭಾರತ ರಷ್ಯಾದಿಂದಲೇ ಆಮದು ಮಾಡಿಕೊಳ್ಳುತ್ತಿದೆ. ಹಾಗಾಗಿ, ವಿಶ್ವಸಂಸ್ಥೆಯಲ್ಲಿ ರಷ್ಯಾದ ನಡೆಯನ್ನು ವಿರೋಧಿಸಿ ಮಂಡನೆಯಾದ ನಿರ್ಣಯದ ಮತದಾನದಲ್ಲಿ ಭಾರತ ಮತದಾನ ಮಾಡದೇ ತಟಸ್ಥವಾಗಿ ಉಳಿಯಿತು. ಇನ್ನೊಂದೆಡೆ, ಉಕ್ರೇನ್ ಜಮ್ಮು ಕಾಶ್ಮೀರ ವಿಷಯದಲ್ಲೇ ಆಗಲಿ, ಸಿಎಎ ಮೊದಲಾದ ಸಂದರ್ಭಗಳಲ್ಲಿ ಭಾರತ ವಿರೋಧಿ ದನಿಯಲ್ಲಿ ಮಾತನಾಡಿತ್ತು, ವಿಶ್ವಸಂಸ್ಥೆಯಲ್ಲೂ ಹಾಗೆಯೇ ನಡೆದುಕೊಂಡಿತ್ತು ಎಂಬುದನ್ನು ನಾವು ಗಮನಿಸಬಹುದು. ಭಾರತದ ಸುಮಾರು 19,000 ವಿದ್ಯಾರ್ಥಿಗಳು ಉಕ್ರೇನಿನಲ್ಲಿ ವ್ಯಾಸಂಗ (ಹೆಚ್ಚಿನವರು ವೈದ್ಯಕೀಯ ಪದವಿ) ಮಾಡುತ್ತಿದ್ದಾರೆ. ಅವರಿಗೆಲ್ಲ ದೇಶ ಬಿಟ್ಟು ಬರುವಂತೆ ಭಾರತದ ವಿದೇಶಾಂಗ ಇಲಾಖೆ ಎಚ್ಚರಿಕೆ ಕೊಟ್ಟಿತ್ತಾದರೂ ಕೆಲವರು ಮಾತ್ರ ಯುದ್ಧ ಶುರುವಾಗುವ ಮೊದಲೇ ಬಂದಿದ್ದರು. ಉಳಿದವರನ್ನು ವಾಪಸ್ ಕರೆತರಲು ವಿಶೇಷ ವಿಮಾನದ ವ್ಯವಸ್ಥೆ ಮಾಡಿದೆ ಭಾರತ ಸರ್ಕಾರ. ನೆರೆಯ ದೇಶಗಳಾದ ರೊಮೇನಿಯಾ, ಪೋಲೆಂಡ್, ಮಾಲ್ಡೋವಾ, ಹಂಗೇರಿಗಳಿಗೆ ಸತತವಾಗಿ ಭಾರತದ ವಿಮಾನಗಳು ಹಾರಾಟ ನಡೆಸುತ್ತಿವೆ. ಜೊತೆಗೆ ಯುದ್ಧಸಂತ್ರಸ್ತರಿಗೆ ಇಲ್ಲಿಂದ ಪರಿಹಾರ ಸಾಮಗ್ರಿಗಳನ್ನೂ ಕೂಡ ಕಳುಹಿಸಲಾಗುತ್ತಿದೆ. ಸ್ವತಃ ನಾಲ್ಕೈದು ಮಂತ್ರಿಗಳೇ ಹೋಗಿ ಭಾರತೀಯರ ಸುರಕ್ಷಿತ ಮರಳುವಿಕೆಯ ವ್ಯವಸ್ಥೆ ಮಾಡುತ್ತಿರುವುದು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತಿದೆ.

## ಹಿಂದೂ ಕಾರ್ಯಕರ್ತರ ಸಾವು ಅಷ್ಟು ಸಸಾರವೇ?

ಇತ್ತೀಚೆಗೆ ಶಿವಮೊಗ್ಗದ ಕೋಟೆ ಪ್ರಖಂಡದ ಬಜರಂಗದಳದ ಕಾರ್ಯಕರ್ತ ಹರ್ಷನನ್ನು SDPI ಮತ್ತು PFIನ ಗೂಂಡಾಗಳು ತಡರಾತ್ರಿಯಲ್ಲಿ ಮಧ್ಯ ರಸ್ತೆಯಲ್ಲಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಹಿಂದೂಪರ ನಿಲುವುಗಳನ್ನು ಹೊಂದಿರುವ ಯುವ ಕಾರ್ಯಕರ್ತರನ್ನು ಕೊಲ್ಲುವ ಪರಿಪಾಠ ಕರ್ನಾಟಕದಲ್ಲಿ ಹೆಚ್ಚಾಗತೊಡಗಿದೆ. ಹಿಂದೆ ಕಾಂಗ್ರೆಸ್ ಆಡಳಿತದಲ್ಲಿದ್ದಂತೆ ಈಗಲೂ ಮುಂದುವರೆದಿರುವುದು ದುರಾದೃಷ್ಟಕರ. ಬಡ ಟೇಲರನ ಮಗನೊಬ್ಬನನ್ನು ಹಾಗೆ ಕೊಂದಿರುವುದು ನಿಜಕ್ಕೂ ಖೇದಕರ. ಕುಟುಂಬಕ್ಕೆ ಆಧಾರವಾಗಿದ್ದ ಬೆಳೆದುನಿಂತ ಮಗನನ್ನು ಕಳೆದುಕೊಂಡ ಆ ಕುಟುಂಬದ ಪರಿಸ್ಥಿತಿ ಕರುಣಾಜನಕ.

ಹರ್ಷನ ಸಾವಿನ ನಂತರ ಕೊಲೆಗಾರರನ್ನು ಹಿಡಿಯಲು ಪೋಲೀಸ್ ಇಲಾಖೆ ಕಾರ್ಯಪ್ರವೃತ್ತವಾಗಿದೆ. ಆತನ ಶವದ ಅಂತಿಮಯಾತ್ರೆಯ ಮೇಲೆ SDPI ಮತ್ತು PFIನ ಕೆಲ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದು, ತಲ್ವಾರ್, ಹಾಕಿ ಸ್ಟಿಕ್ ಮೊದಲಾದವುಗಳನ್ನು ಹಿಡಿದು ಓಡಾಡುತ್ತಾ ಜೀವ ಬೆದರಿಕೆ ಒಡ್ಡುತ್ತಿದ್ದರು. ಅಂದು ಆಜಾದ್ ನಗರ ಶೀಗೇಹಟ್ಟಿ ಸೇರಿದಂತೆ ಶಿವಮೊಗ್ಗ ನಗರದ ಅನೇಕ ಭಾಗಗಳು ಉದ್ವಿಗ್ನಗೊಂಡಿದ್ದವು.

ಹಿಂದೂಪರ ಸಂಘಟನೆಗಳು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದ್ದಾರೆ, ಅನೇಕ ನಾಯಕರು ಹರ್ಷನ ಮನೆಗೆ ಭೇಟಿ ನೀಡಿದ್ದಾರೆ. ಅಲ್ಲದೆ ಅವರ ಮನೆಗೆ ಇಡಿಯ ಹಿಂದೂ ಸಮಾಜ ಉದಾರವಾದ ಸಹಾಯಹಸ್ತವನ್ನೂ ಚಾಚಿದೆ. ಆದರೆ ಮನೆಗೆ ಮಗನಾಗಿದ್ದವನು ಮರಳಿ ಬರುತ್ತಾನೆಯೆ?




ಎನ್ನುವ ಪ್ರಶ್ನೆ ಸದಾ ಕಾಲ ಕಾಡುತ್ತಿರುತ್ತದೆ.

ಹರ್ಷನ ಸಾವಿಗೆ ನ್ಯಾಯ ದೊರೆಯಬೇಕಾಗಿದೆ. ಕೇವಲ ಹರ್ಷ ಮಾತ್ರವಲ್ಲ ಹಿಂದೂ ಸಮಾಜದ ಕಾರ್ಯಪ್ರವೃತ್ತರಾಗಿದ್ದ ಕಾರಣಕ್ಕಾಗಿಯೇ ಕೊಲೆಯಾದ ರುದ್ರೇಶ್, ಕುಟ್ಟಪ್ಪ, ಪರೇಶ್ ಮೇಸ್ತ... ಹೀಗೆ ಅನೇಕ ಕಾರ್ಯಕರ್ತರು ಹಿರಿದಾದ ಧರ್ಮಕಾರ್ಯಕ್ಕಾಗಿ ಮಡಿದಿದ್ದಾರೆ ಅವರೆಲ್ಲರ ಸಾವಿಗೂ ನ್ಯಾಯ ದೊರೆಯಬೇಕಿದೆ.

ಇವುಗಳೆಲ್ಲವನ್ನೂ ಪ್ರತ್ಯೇಕ ಕೇಸುಗಳೆಂದು ಪರಿಗಣಿಸದೆ, ಹಿಂದೂ ಕಾರ್ಯಕರ್ತರ ಮೇಲೆ ನಡೆದ ದಾಳಿಯೆಂದು ಇದನ್ನು Act of Terror ಎಂದು ಪರಿಗಣಿಸಿ ತನಿಖೆಯಾಗಬೇಕಿದೆ. ಕರ್ನಾಟಕದಲ್ಲಿರುವ Anti Terror Squad (ATS) ಅನ್ನು ಬಲಪಡಿಸಲು, ಅಲ್ಲಿರುವ ಸಿಬ್ಬಂದಿಯನ್ನು ಹೆಚ್ಚಿಸಬೇಕಿದೆ. ಅದಕ್ಕೆ ಪೂರಕವಾಗಿ ಬಲವಾದ ಕಾನೂನು ರೂಪಿಸಬೇಕಿದೆ. ಬೆಂಗಳೂರಿನಲ್ಲಿ NIA ಕೇವಲ ತನ್ನ ಶಾಖೆಯನ್ನು ವಿಸ್ತರಿಸಿದ್ದು ಅದರ ಕಚೇರಿಯನ್ನು ತೆರೆಯಬೇಕಿದೆ. ಆಗ ಮಾತ್ರ ಈ ರೀತಿಯ ಘಟನೆಗಳಿಗೆ ತಿಲಾಂಜಲಿ ಹೇಳಲು ಸಾಧ್ಯವಾಗುತ್ತದೆ.

ಫ್ರೆಡ್ ಹ್ಯಾಂಪ್ಟನ್ ಬರೆಯುತ್ತಾನಲ್ಲ, “You can kill a revolutionary, not a revolution” ಹಾಗೆ ಹರ್ಷನನ್ನು ಕೊಂದ ತಕ್ಷಣ ಹಿಂದೂ ಕಾರ್ಯಕರ್ತರ ಜಂಘಾಬಲ ಉಡುಗಿ ಹೋಗುವುದಿಲ್ಲ ಮತ್ತು ಸಾವಿರಾರು ಹಿಂದೂ ಕಾರ್ಯಕರ್ತರು ಹಿಂದೂ ಸಮಾಜದ ಕೆಲಸಕ್ಕೆ ತೊಡಗುತ್ತಾರೆ ಎನ್ನುತ್ತಾರೆ ಅಲ್ಲಿನ ಸ್ಥಳೀಯ ಬಜರಂಗದಳದ ಕಾರ್ಯಕರ್ತರು.

## ಸಂಸ್ಮರಣೆ

# ರಾಮ್ ಪ್ರಸಾದ್ ಬಿಸ್ಮಿಲ್ (11ನೇ ಜೂನ್, 1897 – 19ನೇ ಡಿಸೆಂಬರ್ 1927)




ಉತ್ತರ ಪ್ರದೇಶದ ಶಹಜಹಾನಪುರದಲ್ಲಿ ನೆಲೆಸಿದ್ದ ಮಾಲಾಧರ ಹಾಗೂ ಮೂಲಮತಿ ದಂಪತಿಗಳಿಗೆ ಜೂನ್ 11, 1897ರಂದು ರಾಮ ಪ್ರಸಾದ್ ಬಿಸ್ಮಿಲ್ ಅವರು ಜನಿಸಿದರು. ಅವರ ತಂದೆಯವರಿಂದ ಹಿಂದಿ ಮತ್ತು ಬಂಗಾಳಿ ಭಾಷೆಯನ್ನು ಕಲಿತ ನಂತರ ಸ್ಥಳೀಯ ಮೌಲ್ವಿಯೊಬ್ಬರ ಬಳಿ ಉರ್ದು ಕಲಿತರು ಮತ್ತು ಶಾಲೆಯಲ್ಲಿ ಆಂಗ್ಲ ಭಾಷೆಯನ್ನು ಕಲಿಯುವುದರ ಮೂಲಕ ಆ ಮೂರೂ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಂಡರು. ತಂದೆಯವರ ವಿರೋಧದ ಹೊರತಾಗಿಯೂ ಅಂದಿನ ಯುವಕರಂತೆ ಬಿಸ್ಮಿಲ್ಲರೂ ಸಹಾ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವ ನಿರ್ಧಾರ ಮಾಡಿ ಅದಕ್ಕೆ ಆರ್ಯ ಸಮಾಜದ ಹಾದಿಯನ್ನು ತುಳಿದರು. ಅಲ್ಲಿ ಅವರು ತಮ್ಮ ಕವಿತೆಗಳ ಮುಖಾಂತರ ಯುವಕರಲ್ಲಿ ಜಾಗೃತಿ ಮೂಡಿಸತೊಡಗಿದರು. ರಾಮ್, ಅಗ್ಯತ್, ಮತ್ತು ಬಿಸ್ಮಿಲ್ ಎಂಬ ಕಾವ್ಯನಾಮಗಳಲ್ಲಿ ದೇಶಭಕ್ತಿಯ ಗೀತೆಗಳನ್ನು ರಚಿಸುತ್ತಿದ್ದರಿಂದ ರಾಮ್ ಪ್ರಸಾದ್ ಎಂಬ ಅವರ ಹೆಸರಿನ ಜೊತೆ ಬಿಸ್ಮಿಲ್ ಕೂಡಾ ಸೇರಿಕೊಂಡಿತು.

ಆರ್ಯ ಸಮಾಜದ ಹರದಯಾಲ ಅವರ ಮಿತ್ರರಾಗಿದ್ದ ಭಾಯೀ ಪರಮಾನಂದ ಅವರಿಗೆ ಬ್ರಿಟಿಷ್ ಸರ್ಕಾರ ಮರಣ ದಂಡನೆಯನ್ನು ವಿಧಿಸಿದ್ದನ್ನು ವಿರೋಧಿಸಿ **'ಮೆರಾ ಜನಮ್'** ಎಂಬ ಪದ್ಯವನ್ನು ರಚಿಸಿ ಬ್ರಿಟಿಷರನ್ನು ಭಾರತದಿಂದ ಹೊರದಬ್ಬಲೇಬೇಕು ಎಂದು ನಿಶ್ಚಯಿಸಿ **'ಮೈತ್ರಿ ವೇದಿ'** ಎಂಬ ಕ್ರಾಂತ್ರಿಕಾರಿ ಸಂಸ್ಥೆಯನ್ನು ಸ್ಥಾಪಿಸಿದರು. ಅವರ ಜೊತೆ ಔರೈ ಎಂಬ ಊರಿನ ಶಾಲಾ ಶಿಕ್ಷಕರಾದ ಪಂಡಿತ್ ಗೇಂಡಾ ಲಾಲ್ ದೀಕ್ಷಿತ್ ಜೊತೆಗೂಡಿ ಸ್ವದೇಶಾಭಿಮಾನವನ್ನು ಹುಟ್ಟಿಸುವ ಒಂದು ಯುವಕರ ಸಂಘಟನೆಯನ್ನು ಪ್ರಾರಂಭಿಸಿದರು. ದೀಕ್ಷಿತ್ ಅವರಿಗೆ ಸ್ಥಳೀಯ ಡಾಕೂಗಳ ಸಂಪರ್ಕವಿದ್ದ ಕಾರಣ ಅವರನ್ನೂ ಈ ಸಂಘಟನೆಗೆ ಸೇರಿಸಿಕೊಂಡು ಬ್ರಿಟೀಷರ ವಿರುದ್ಧ ಹೋರಾಡಬೇಕೆಂಬ ಬಯಕೆ.

ಇವರಿಬ್ಬರು ಸೇರಿ ಸುತ್ತಮುತ್ತಲಿನ ಪ್ರದೇಶಗಳ ಯುವಕರನ್ನು ಸಂಘಟಿಸಿ ಸಂಸ್ಥೆಯನ್ನು ಮತ್ತಷ್ಟು ಬಲಪಡಿಸಿದರು, ಇಷ್ಟೆಲ್ಲಾ ಕ್ರಾಂತಿ ಚಟುವಟಿಕೆಗಳನ್ನು ನಡೆಸಲು ಅವರಿಗೆ ಹಣದ ಅವಶ್ಯಕತೆ ಇದ್ದ ಕಾರಣ 1918ರಲ್ಲಿ ಮೈನ್‌ಪುರ ಸರ್ಕಾರಿ ಖಜಾನೆಯೂ ಸೇರಿದಂತೆ ಮತ್ತೆರಡು ಸರ್ಕಾರಿ ಕಛೇರಿಗಳನ್ನು ಲೂಟಿಯನ್ನು ಮಾಡಿದ ಪರಿಣಾಮ ಬಿಸ್ಮಿಲ್ ಮತ್ತವರ ಸಂಗಡಿಗರನ್ನು ಪೊಲೀಸರು ಹುಡುಕುತ್ತಿದ್ದರು. ಅದೊಮ್ಮೆ ದೆಹಲಿ ಹಾಗು ಆಗ್ರಾ ನಡುವೆ ಮತ್ತೊಂದು ಲೂಟಿ ಮಾಡಬೇಕೆಂಬ ಯೋಜನೆ ಮಾಡುತ್ತಿರುವ ಸಮಯಕ್ಕೆ ಪೊಲೀಸರು ಆಗಮಿಸಿ ಗುಂಡಿನ ಸುರಿಮಳೆ ಗೈದಾಗ ಪೋಲೀಸರಿಂದ ತಪ್ಪಿಸಿಕೊಳ್ಳಲು ಬಿಸ್ಮಿಲ್ ಅವರು ಯಮುನಾ ನದಿಯಲ್ಲಿ ಧುಮುಕಿದ್ದನ್ನು ಕಂಡು ಎಲ್ಲರೂ ಬಿಸ್ಮಿಲ್ಲರು ಮೃತಪಟ್ಟಿರಬಹುದೆಂದೇ ನಂಬಿದ್ದರು, ಆದರೆ ಬಿಸ್ಮಿಲ್ಲರು ತಮ್ಮ ಶಕ್ತಿ ಸಾಮರ್ಥ್ಯದಿಂದ ಯಮುನೆಯನ್ನು ಈಜಿ ತಪ್ಪಿಸಿಕೊಂಡಿದ್ದರು. ಅದಾದ ಕೆಲ ದಿನಗಳ ನಂತರ ಆಗ್ರ ಕೋಟೆಯಲ್ಲಿ ಪೋಲೀಸರಿಂದ ಬಂಧಿತರಾದರೂ ಅಲ್ಲಿಂದ ಮತ್ತೊಮ್ಮೆ ತಪ್ಪಿಸಿಕೊಂಡು ದೆಹಲಿಯಲ್ಲಿ ಅಡಗಿಕೊಂಡರು. ಪೋಲೀಸರು ಈ ಪ್ರಕರಣವನ್ನು ಮೈನ್ಪುರಿ ಪಿತೂರಿ ಎಂದು ಕರೆದು ಅವರ ವಿರುದ್ಧ ಮೈನ್ಪುರದ ನ್ಯಾಯಾಲಯದಲ್ಲಿ ತನಿಖೆ ನಡೆದು ನವೆಂಬರ್ 11, 1919ರಂದು ನ್ಯಾಯಾಧೀಶರಾದ ಬಿ.ಎಸ್. ಕ್ರಿಸ್ ಅವರು ಆರೋಪಿಗಳ ವಿರುದ್ಧ ಕಠಿಣ ತೀರ್ಮಾನವನ್ನು ನೀಡಿದ್ದರು. ಇನ್ನು ಯಾವುದೇ ಕ್ರಾಂತಿಕಾರಿ ಸಂಘಟನೆಯಲ್ಲಿ ಭಾಗಿಯಾಗುವುದಿಲ್ಲ ಎಂಬ ಮುಚ್ಚಳಿಕೆಯನ್ನು ಬರೆಸಿಕೊಂಡು, 1920ರಲ್ಲಿ ಬಿಸ್ಮಿಲ್ಲರನ್ನು ನ್ಯಾಯಾಲಯ ಬಿಡುಗಡೆ ಮಾಡಿತು.

ಅದೊಂದು ದುರ್ದಿನ ಬ್ರಿಟಿಷ್ ಸರ್ಕಾರವು ರಾಮ್ ಪ್ರಸಾದರನ್ನು ಮುಂಜಾನೆಯ ಹೊತ್ತಲ್ಲಿ ಸಂಚು ಹೂಡಿ ಅವರ ಸ್ವಗೃಹದಲ್ಲೇ ಬಂಧಿಸಿಬಿಟ್ಟಿತು ಮತ್ತು ಸುಮಾರು 18 ತಿಂಗಳುಗಳ ಕಾಲ ಕಾಟಾಚಾರದ ವಿಚಾರಣೆ ನಡೆಸಿ 1927ರ ಡಿಸೆಂಬರ್ 19ರಂದು ಗೋರಖ್ಪುರದಲ್ಲಿ ಗಲ್ಲಿಗೇರಿಸಿತು. ಸೆರೆಮನೆಯಲ್ಲಿದ್ದ ಬಿಸ್ಮಿಲ್ಲರನ್ನು ನೋಡಲು ಅವರ ತಾಯಿಯವರು ಬಂದಿದ್ದಾಗ, ತಾಯಿಯವರನ್ನು ಕಂಡ ಬಿಸ್ಮಿಲ್ ಗಳಗಳನೆ ಅತ್ತರಂತೆ. ಇದನ್ನು ನೋಡಿದ ಅವರ ತಾಯಿಗೆ ಬೇಸರವಾಗಿ, "ಸಾವಿಗೆ ಇಷ್ಟೊಂದು ಅಂಜುವವನಾಗಿದ್ದರೆ ಈ ಮಾರ್ಗವನ್ನೇಕೆ ಆರಿಸಿಕೊಂಡೆ?" ಎಂದು ಕೇಳಿದರು.

ಸಾವರಿಸಿಕೊಂಡ ಬಿಸ್ಮಿಲ್, "ಅಮ್ಮಾ ಇವು ಸಾವಿನ ಬೆದರಿಕೆಯಿಂದ ತೊಟ್ಟಿಕ್ಕಿದ ಹನಿಗಳಲ್ಲ, ಒಬ್ಬ ಮಾತೃಭಕ್ತ ತನ್ನ ತಾಯಿಯ ದರ್ಶನವನ್ನು ಕಟ್ಟಕಡೆಯ ಸಲ ಪಡೆಯುವಾಗ ಅವನ ಪರಿಶುದ್ಧ ಪ್ರೀತಿಯ ಪ್ರತೀಕವಾದ ಕೊನೆಯ ಅಶ್ರುಬಿಂದುಗಳು", ಎಂದಾಗ ಮಗನ ಆ ಮಾತುಗಳನ್ನು ಕೇಳಿದ ತಾಯಿ ಬಾಯಿಯಿಂದ ಮಾತೇ ಹೊರಡಲಿಲ್ಲ.




## ಪುಸ್ತಕ ಪರಿಚಯ

# RSS ಸ್ಥಾಪಕರ ಚಿಂತನೆಗಳು

ಪ್ರಕಾಶಕರು : ಸಾಹಿತ್ಯ ಸಂಗಮ
ಬೆಲೆ : 150/-

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪಕರಾದ ಶ್ರೀ ಕೇಶವ ಬಲಿರಾಮ್ ಹೆಡ್ಗೆವಾರ್ ಅವರ ಚಿಂತನೆಗಳನ್ನು ಅಕ್ಷರ ರೂಪದಲ್ಲಿ ಮೂಡಿಸಿರುವ ಕೃತಿಯಿದು. "ನಾವು ಹಿಂದು ಸಮಾಜದಲ್ಲಿ ಹುಟ್ಟಿದ್ದೇವೆ. ಆದ್ದರಿಂದ ಈ ಸಮಾಜವನ್ನು ಸಂಘಟಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. ಅದನ್ನು ನಾವು ಪೂರ್ತಿ ನಿಭಾಯಿಸಬೇಕಾಗಿದೆ. ದೊಡ್ಡದಾಗುತ್ತಿರುವ ಜವಾಬ್ದಾರಿ ಇದು. ಬಹು ವಿಶಾಲವಾದ ಕಾರ್ಯಕ್ಷೇತ್ರ ನಮ್ಮದು ಅದು ಯಾವುದೇ ಒಂದು ಊರು ಅಥವಾ ಒಂದು ಪ್ರಾಂತಕ್ಕೆ ಸೀಮಿತವಾದುದಲ್ಲ. ಆಸೇತುಹಿಮಾಚಲ ಇಡೀ ಭಾರತಭೂಮಿಯೇ ನಮ್ಮ ಕಾರ್ಯಕ್ಷೇತ್ರವಾಗಿದೆ. ಅದಕ್ಕೆ ತಕ್ಕಂತೆ ನಮ್ಮ ದೃಷ್ಟಿಕೋನವೂ ವಿಶಾಲವಾಗಬೇಕು. ಸಮಸ್ತ ಹಿಂದೂಸ್ಥಾನವೂ ನನ್ನ ಮನೆ ಎಂದು ನಮಗನ್ನಿಸಬೇಕು. ಅದಕ್ಕನುಸಾರವಾಗಿ ನಾವು ಎಷ್ಟರಮಟ್ಟಿಗೆ ಕೆಲಸ ಮಾಡಬೇಕಾಗಿದೆ, ಯಾವ ಕೆಲಸ ಮಾಡಬೇಕಾಗಿದೆ ಎಂಬುದನ್ನು ಮೊದಲೇ ನಿಶ್ಚಯಿಸಿಕೊಳ್ಳೋಣ ಮತ್ತು ಪಣತೊಟ್ಟು ಆ ಕಾರ್ಯವನ್ನು ಸಾಧಿಸಿಯೇ ತೀರೋಣ

ಸಂಘಕ್ಕೆ ಸಂಸ್ಕಾರಗಳ ಬಗ್ಗೆ ಪೂರ್ಣ ನಂಬಿಕೆಯಿದೆ. ಸಂಸ್ಕಾರ ಇದ್ದಂತೆ ಸ್ವಭಾದ ಒಂದೇ ಸ್ವಭಾವವುಳ್ಳ ಅನೇಕ ಜನರು ಒಗ್ಗೂಡಿ ಬಂದರೆಂದರೆ ಸಂಘಟನೆಗೆ ಅನುಕೂಲವಾದ ವಾತಾವರಣ ಮೂಡುತ್ತದೆ. ಅಂತದ ಶ್ರದ್ಧೆ, ಪೌರುಷ, ಧೈಯನಿಷ್ಠೆಗಳಿಂದ ತುಂಬಿದ, ನಿರಾಶೆಯನ್ನು ಹೊಡೆದೋಡಿಸುವಂತಹ ಸ್ಫೂರ್ತಿದಾಯಕ ವಾತಾವರಣವನ್ನು ದೇಶದ ಉದ್ದಗಲಕ್ಕೂ ನಾವು ನಿರ್ಮಿಸಬೇಕಾಗಿದೆ. ಸ್ವಯಂಸೇವಕರು ಹೋದ ಹೋದಲ್ಲೆಲ್ಲಾ ಇದೇ ವಾತಾವರಣವನ್ನು ಕೊಂಡೊಯ್ಯಲಿ ವಾತಾವರಣವನ್ನು ಪರಿಶುದ್ಧವಾಗಿಡಲು ಸ್ವಯಂ ಸೇವಕರು ಮೈಯೆಲ್ಲ ಕಣ್ಣಾಗಿ ಹಗಲು ರಾತ್ರಿ ಎಚ್ಚರದಿಂದಿರಲಿ. ಒಮ್ಮೆ ಇಂತಹ ಪ್ರಭಾವಿ ವಾತಾವರಣವನ್ನು ರೂಪಿಸುವ ನಮ್ಮಲ್ಲಿ ಬೇರೂರಿತೆಂದರೆ ಸಂಘಕ್ಕೆ ಇನ್ನಾವುದರ ಭಯವೂ ಇಲ್ಲ."

## ಎಲ್ಲೋ ಕೇಳಿದ ಕಥೆ

ಸಂತ ಕಬೀರರು ಒಂದು ಸಲ ಪೇಟೆಯಿಂದ ಹೋಗುತ್ತಿದ್ದರು, ಮಾರ್ಗದಲ್ಲಿ ಒಬ್ಬ ವ್ಯಾಪಾರಿಯ ಪತ್ನಿಯು ಹಿಟ್ಟನ್ನು ಬೀಸುತ್ತಿರುವುದು ಕಾಣಿಸಿತು. ಹಿಟ್ಟನ್ನು ನೋಡಿ ಕಬೀರರಿಗೆ ಅಳು ಬಂತು. ಅನೇಕ ಜನರು ಅವರಿಗೆ ಅಳುತ್ತಿದ್ದ ಕಾರಣವನ್ನು ಕೇಳಿದರು. ಆದರೆ ಕಬೀರರು ಏನೂ ಹೇಳಲಿಲ್ಲ. ಅಷ್ಟರಲ್ಲೇ ನಿಪಟ ನಿರಂಜನ ಎಂಬ ಸಾಧು ಬಂದರು. ಅವರು ಕಬೀರರಿಗೆ ಅಳುವ ಕಾರಣವನ್ನು ಕೇಳಿದರು. ಆ ಸಾಧುವಿನ ಶ್ರೇಷ್ಠತೆಯನ್ನು ತಿಳಿದ ಕಬೀರರು ಹೇಳಿದರು "ಈ ಹಿಟ್ಟನ್ನು ಬೀಸುವುದನ್ನು ನೋಡುವಾಗ ನನ್ನ ಮನಸ್ಸಿನಲ್ಲಿ ಚಿಂತೆಯು ಉತ್ಪನ್ನವಾಗಿದೆ", ಈ ಗಿರಣಿಯಲ್ಲಿ ಗೋಧಿಯನ್ನು ಹಾಕಿದಾಗ ಹೇಗೆ ಬೀಸಿ ಹಿಟ್ಟಾಗುತ್ತದೆಯೊ, ಅದೇ ಪ್ರಕಾರ ಈ ಭವಸಾಗರದಲ್ಲಿ ಸಿಕ್ಕು ನನ್ನ ಸ್ಥಿತಿಯು ಇದೇ ಆಗಿದೆ. ಈ ವಿಚಾರದಿಂದ ಮನಸ್ಸು ದುಃಖಿಯಾಗಿದೆ."

ಆಗ ಆ ಸಾಧು ಸ್ವಲ್ಪ ವಿಚಾರ ಮಾಡಿ ಹೇಳಿದರು "ಕಬೀರರೇ, ಗಿರಣಿಯಲ್ಲಿ ಗೋಧಿಯನ್ನು ಹಾಕಿದಾಗ ಬೀಸಿ ಹಿಟ್ಟಾಗುತ್ತದೆ, ಇದು ಸತ್ಯವಿದೆ. ಆದರೆ ಖುಂಟೆಯ ಹತ್ತಿರ ಯಾವ ಕಾಳು ಇದ್ದಿತೋ, ಅದು ಪುಡಿಯಾಗಲಿಲ್ಲ. ಹಾಗೆಯೇ ಪರಮೇಶ್ವರನ ನಾಮದಿಂದ ಯಾರು ದೂರ ಇರುತ್ತಾರೋ, ಅವರು ಕಾಲದ ಪ್ರವಾಹದಲ್ಲಿ ಸಿಲುಕಿಕೊಳುತ್ತಾರೆ, ಆದರೆ ನಾಮಜಪ ಮಾಡುವವರಿಗೆ, ಈಶ್ವರನ ನಿಕಟದಲ್ಲಿ ಇರುವವರಿಗೆ ಕಾಲದ ಭಯವಾಗುವುದಿಲ್ಲ". ಎನ್ನುತ್ತಾರೆ.

-----<>-----

ಶ್ರೀಮನ್ನಾರಾಯಣನು ತನ್ನ ಭಕ್ತರ ಅಪರಾಧಗಳನ್ನು ಮನ್ನಿಸಿ ಅವರನ್ನು ಉದ್ಧರಿಸಿದ ಅನೇಕ ನಿದರ್ಶನಗಳು ನಮ್ಮ ಪುರಾಣಗಳಲ್ಲಿ ಪ್ರಸ್ತಾಪಿತವಾಗಿವೆ. ಶ್ರೀ ಕೃಷ್ಣಾವತಾರದಲ್ಲಿ ನಡೆದ ಇಂತಹ ಅನೇಕ ಸನ್ನಿವೇಶಗಳು ಶ್ರೀಮದ್ ಭಾಗವತ ಮತ್ತು ಶ್ರೀಮದ್ ಮಹಾಭಾರತದಲ್ಲಿ ನಮಗೆ ಕಾಣಸಿಗುತ್ತವೆ.

ಹಾಗೆಯೇ ಪರಮಾತ್ಮನು ಬಲಿಚಕ್ರವರ್ತಿಯ ಅಪರಾಧಿ ಮನೋವೃತ್ತಿಯನ್ನು ಪ್ರದರ್ಶಿಸಿ, ಮನ್ನಿಸಿ, ಅವನ ಸೇವೆಗೇ ನಿಂತ ಈ ಕಥೆಯನ್ನು ಭಾಗವತದ ದಶಮಸ್ಕಂದದಲ್ಲಿ ಸವಿಸ್ತಾರವಾಗಿ ಹೇಳಲಾಗಿದೆ.

ಕ್ಷೀರ ಸಮುದ್ರದ ಮಧ್ಯದಲ್ಲಿರುವ, ಶ್ವೇತ ದ್ವೀಪದಲ್ಲಿರುವ ಬ್ರಹ್ಮಾದಿ ದೇವತೆಗಳ ದರ್ಶನೋದ್ದೇಶದಿಂದ ಪರಮಾತ್ಮನು ಒಮ್ಮೆ ಬಂದಿದ್ದನು. ಅಸುರರ ರಾಜನೂ ಮತ್ತು ಪರಮಾತ್ಮನ ಪರಮ ಭಕ್ತನೂ ಆದ ಬಲಿಚಕ್ರವರ್ತಿಯೂ ಸಹ ಅದೇ ವೇಳೆಗೆ ಪರಮಾತ್ಮನ ಸೇವೆಯ ನಿಮಿತ್ತದಿಂದ ಶ್ವೇತದ್ವೀಪಕ್ಕೆ ಬಂದನು. ಅವನಲ್ಲಿ ಅಸುರಾವೇಶವಿರುವುದನ್ನು ಎಲ್ಲರಿಗೆ ತೋರ್ಪಡಿಸುವ ಸಲುವಾಗಿ ಪರಮಾತ್ಮನು ದೇವತೆಗಳನ್ನು ಮಲಗಿಕೊಳ್ಳುವಂತೆ ಸಂಕೇತ ಮಾಡಿದನು ಮತ್ತು ತನ್ನ ಕಿರೀಟವನ್ನು ತಗೆದು ಪಕ್ಕದಲ್ಲಿಟ್ಟು, ಎಂದಿಗೂ ನಿದ್ದೆ ಇಲ್ಲದವನಾದರೂ ಸಹ ತಾನೂ ಮಲಗಿಕೊಂಡು ನಿದ್ರೆ ಮಾಡುವವನಂತೆ ನಟಿಸಿದನು.

ಬಲಿಚಕ್ರವರ್ತಿಯು ಅಲ್ಲಿಗೆ ಬಂದು ಎಲ್ಲರೂ ನಿದ್ರೆ ಮಾಡುತ್ತಿರುವುದನ್ನು ಕಂಡು ಸ್ವಲ್ಪ ವಿಚಲಿತನಾದನು. ಕ್ಷಣಮಾತ್ರದಲ್ಲಿ ಆಸುರಾವೇಶದಲ್ಲಿ ಪರಮಾತ್ಮನ ಸೇವೆಗಾಗಿ ಬಂದ ತನ್ನ ಉದ್ದೇಶವನ್ನು ಮರೆತು, ಪರಮಾತ್ಮನ ತಲೆಯ ಬಳಿ ಇದ್ದ ಅದ್ಭುತವಾದ ಕಿರೀಟದೆಡೆಗೆ ಆಕರ್ಷಿತನಾದನು. ಮೆಲ್ಲನೆ ಅದನ್ನು ತೆಗೆದುಕೊಂಡು ತನ್ನ ವಸ್ತ್ರದಲ್ಲಿ ಸುತ್ತಿಕೊಂಡು, ಪರಮಾತ್ಮನಿಗೆ ನಮಸ್ಕರಿಸಿ, ಅಲ್ಲಿಂದ ಹೊರಟು ಹೋದನು. ನಂತರ ಎಲ್ಲಾ ಬ್ರಹ್ಮಾದಿ ದೇವತೆಗಳೂ ಮತ್ತು ಪರಮಾತ್ಮನು ಬಲಿಚಕ್ರವರ್ತಿಯ ಕಳ್ಳತನದ ಬುದ್ಧಿಯನ್ನು ಕಂಡು ನಸುನಕ್ಕರು.

ಅನಂತರದ ಸಮಯದಲ್ಲಿ ಗರುಡನು ಬಲಿಚಕ್ರವರ್ತಿಯನ್ನು ಅನುಸರಿಸಿ ಪಾತಾಳಲೋಕಕ್ಕೆ ಹೋಗಿ, ಅವನನ್ನು ಜಯಿಸಿ ಕಿರೀಟವನ್ನು ಮರಳಿ ತೆಗೆದುಕೊಂಡು ಬಂದು ಪರಮಾತ್ಮನ ತಲೆಯ ಮೇಲೆ ಇಟ್ಟು ನಮಸ್ಕರಿಸಿದನು. ಇಂತಹ ಅಪರಾಧ ಮಾಡಿದ ಬಲಿಚಕ್ರವರ್ತಿಯನ್ನು ಮನ್ನಿಸಿ, ಅವನ ಭಕ್ತಿಗೆ ಪ್ರಾಶಸ್ತ್ಯಕೊಟ್ಟು, ಅವನ ಮನೆಯ ಬಾಗಿಲನ್ನು ವಾಮನ ರೂಪದಿಂದ ಕಾಯುತ್ತಾ ಶ್ರೀಮನ್ನಾರಾಯಣನು ಅದ್ಯಾಪಿ ರಕ್ಷಿಸುತ್ತಿರುವನು ಎಂಬ ಪ್ರತೀತಿಯಿದೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ನಾಗರೇಖಾ ಎಂ.ಜಿ.




"ದೇಶದಲ್ಲಿ 2 ಕೋಟಿಗೂ ಹೆಚ್ಚು ಆರೋಗ್ಯ ಮತ್ತು ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ನಾಗರಿಕರು ಬೂಸ್ಟರ್ ಡೋಸ್ ಅನ್ನು ಸ್ವೀಕರಿಸಿದ್ದಾರೆ" ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಇಂದು ಹೇಳಿದ್ದಾರೆ.

ಅರ್ಹ ಫಲಾನುಭವಿಗಳು ಮೂರನೇ ಡೋಸ್ ಅನ್ನು ಶೀಘ್ರವಾಗಿ ಪಡೆಯುವಂತೆ ಅವರು ವಿನಂತಿಸಿದ್ದಾರೆ. ದೇಶದ ವಯಸ್ಕ ಜನಸಂಖ್ಯೆಯ ಶೇಕಡಾ 97 ಕ್ಕಿಂತ ಹೆಚ್ಚು ಜನರು ತಮ್ಮ ಮೊದಲ ಡೋಸ್ ಲಸಿಕೆಯನ್ನು ಪಡೆದಿದ್ದಾರೆ. ದೇಶವು ಇದುವರೆಗೂ 2,03,69,898 ಬೂಸ್ಟರ್ ಡೋಸ್ ನೀಡಿದೆ. ಕಳೆದ 24 ಗಂಟೆಗಳಲ್ಲಿ 24.84 ಲಕ್ಷ ಡೋಸ್‌ಗಳ ನೀಡಿಕೆಯೊಂದಿಗೆ ಲಸಿಕಾ ವ್ಯಾಪ್ತಿ 178.29 ಕೋಟಿ ತಲುಪಿದೆ.



ಮಾರ್ಚ್ 1ರ ವೇಳೆಗೆ ಎಲ್ಲಾ ವಿಶ್ವವಿದ್ಯಾಲಯಗಳು ಇ-ಆಫೀಸ್ ಸಾಫ್ಟ್‌ವೇರ್ ಪ್ಲಾಟ್‌ಫಾರ್ಮ ಬಳಸಿ ಕಡತಗಳನ್ನು ಸಲ್ಲಿಸಬೇಕು ಎಂದು ಉನ್ನತ ಶಿಕ್ಷಣ ಸಚಿವ ಅಶ್ವಥ್ ನಾರಾಯಣ್ ಹೇಳಿದ್ದಾರೆ.

ಈ ಬಗ್ಗೆ ಪೂರ್ವ ಸೂಚನೆಗಳ ಹೊರತಾಗಿಯೂ ಕೆಲವು ವಿಶ್ವವಿದ್ಯಾನಿಲಯಗಳು ಭೌತಿಕವಾಗಿ ಫೈಲ್‌ಗಳನ್ನು ಕಳುಹಿಸುವುದನ್ನು ಮುಂದುವರೆಸಿವೆ. ಆದರೆ ಇಲಾಖೆಯು ಫೈಲ್‌ಗಳು, ಪ್ರಸ್ತಾವನೆಗಳು, ಪತ್ರಗಳು ಮತ್ತು ಇತರ ಕಾಗದ-ಆಧಾರಿತ ಸಂವಹನವನ್ನು ವ್ಯವಹರಿಸಲು ಇ-ಆಫೀಸ್ ವ್ಯವಸ್ಥೆಯನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಿದೆ.

ಮಾರ್ಚ್ 1 ರೊಳಗೆ ಎಲ್ಲಾ ವಿಶ್ವವಿದ್ಯಾನಿಲಯಗಳು ಇ-ಕಚೇರಿ ವ್ಯವಸ್ಥೆಗೆ ಬದಲಾಗಬೇಕು ಎಂದು ನಾರಾಯಣ್ ಆದೇಶಿಸಿದ್ದಾರೆ, ಮಾರ್ಚ್ 1 ರ ನಂತರ ಭೌತಿಕವಾಗಿ ಕಳುಹಿಸಲಾದ ಎಲ್ಲಾ ಫೈಲ್ಗಳನ್ನು ಹಿಂತಿರುಗಿಸಲಾಗುತ್ತದೆ ಎಂದಿದ್ದಾರೆ. ಸಾಫ್ಟ್‌ವೇರ್ ಪ್ಲಾಟ್‌ಫಾರ್ಮ್ ಬಳಕೆಯು ವಿಶ್ವವಿದ್ಯಾನಿಲಯಗಳು ಮತ್ತು ಇಲಾಖೆಯ ನಡುವೆ ಪಾರದರ್ಶಕತೆ ಮತ್ತು ಮಾಹಿತಿಯ ತ್ವರಿತ ವರ್ಗಾವಣೆಯನ್ನು ತರುತ್ತದೆ ಎಂದು ಅವರು ಹೇಳಿದ್ದಾರೆ.

ಅಲ್ಲದೆ, ಸಮಿತಿ ರಚನೆಗೆ ಆದೇಶಿಸಿದ ಅವರು, ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್), ರಾಷ್ಟ್ರೀಯ ಶೈಕ್ಷಣಿಕ ಠೇವಣಿ (ಎನ್‌ಎಡಿ) ಮತ್ತು ವಿಶ್ವವಿದ್ಯಾಲಯಗಳ ಡಿಜಿಟಲೀಕರಣ, ರಾಷ್ಟ್ರೀಯ ಶಿಕ್ಷಣ ನೀತಿ 2020ನ ಭಾಗವಾಗಿ ನಡೆಯಬೇಕಾದ ಉಪಕ್ರಮಗಳ ಬಗ್ಗೆ ಎರಡು ವಾರಗಳಲ್ಲಿ ವರದಿ ಕೇಳಿದ್ದಾರೆ.

ಆಡಳಿತ ಮತ್ತು ಅಭಿವೃದ್ಧಿಗಾಗಿ ತಂತ್ರಜ್ಞಾನವನ್ನು ಬಳಸುವುದರಲ್ಲಿ ಭಾರತವು ಅಗ್ರಗಣ್ಯ ರಾಷ್ಟ್ರವಾಗಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ರಾಷ್ಟ್ರೀಯ ದತ್ತಾಂಶ ಕೇಂದ್ರ ಮತ್ತು ಕ್ಲೌಡ್ ನೀತಿಯ ಕರಡು ಕುರಿತು ಕೈಗಾರಿಕಾ ಸಮಾಲೋಚನೆಯ ಸಂದರ್ಭದಲ್ಲಿ ಹೇಳಿದ್ದಾರೆ.

# ಸಾಲುದ್ದದ ಸುದ್ದಿಗಳು

ದತ್ತಾಂಶ ಕೇಂದ್ರ ಮತ್ತು ಕ್ಲೌಡ್ ಕಾರ್ಯಾಚರಣೆಗಳಲ್ಲಿ ದೇಶೀಯ ವೇದಿಕೆಗಳು/ಪರಿಹಾರಗಳ ಬಳಕೆಯನ್ನು ಉತ್ತೇಜಿಸುವುದು ನೀತಿಯ ಉದ್ದೇಶವಾಗಿದೆ ಎಂದು ಸಚಿವರು ಹೇಳಿದರು. ಇಂಧನ ದಕ್ಷ, ಸುಸ್ಥಿರ ಮತ್ತು ಹಸಿರು ದತ್ತಾಂಶ ಕೇಂದ್ರಗಳನ್ನು ಸ್ಥಾಪಿಸಲು ಈ ನೀತಿಯು ಉದ್ದೇಶಿಸಿದೆ ಎಂದು ಅವರು ಹೇಳಿದರು.ರಾಷ್ಟ್ರೀಯ ದತ್ತಾಂಶ ಕೇಂದ್ರದ ಅಗತ್ಯದ ಹೊರತಾಗಿ, ನಮಗೆ ಭಾರತ ಕೇಂದ್ರಿತ ಕ್ಲೌಡ್ ಪ್ರದೇಶದ ಅಗತ್ಯವಿದೆ ಎಂದು ಅವರು ಹೇಳಿದರು. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಕೈಗಾರಿಕೆಗಳ ಕಲ್ಪನೆಗಳಿಗೆ ಮುಕ್ತವಾಗಿದೆ ಮತ್ತು ರಾಷ್ಟ್ರದ ಅಭಿವೃದ್ಧಿಗಾಗಿ ಬದಲಾವಣೆಗಳನ್ನು ಮಾಡಲು ಸಿದ್ಧವಾಗಿದೆ ಎಂದು ಅವರು ಹೇಳಿದರು.

ಪ್ರಸ್ತುತ, ಭಾರತವು ದತ್ತಾಂಶ ಕೇಂದ್ರಗಳಿಗಾಗಿ ಸುಮಾರು 499 ಮೆ.ವ್ಯಾ ಸ್ಥಾಪಿತ ವಿದ್ಯುತ್ ಸಾಮರ್ಥ್ಯವನ್ನು ಹೊಂದಿದೆ ಮತ್ತು 2023 ರ ವೇಳೆಗೆ 1007 ಮೆ.ವ್ಯಾ.ಗೆ ವೃದ್ಧಿಸುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.5 ಮೆ.ವ್ಯಾ ದತ್ತಾಂಶ ಕೇಂದ್ರ (ಐಟಿ ಮತ್ತು ಐಟಿಯೇತರ) ಸ್ಥಾಪನೆಗೆ ಘಟಕವಾರು ವೆಚ್ಚದ ವಿಂಗಡಣೆ ನಿರ್ಮಾಣಪೂರ್ವ, ನಿರ್ಮಾಣ ಮತ್ತು ನಿರ್ಮಾಣೋತ್ತರ ಹಂತಗಳಲ್ಲಿ ದತ್ತಾಂಶ ಕೇಂದ್ರಗಳನ್ನು ಸ್ಥಾಪಿಸಲು ಅಗತ್ಯವಿರುವ ಯೋಜನೆಯ ಹಂತಗಳ ಜೊತೆಗೆ ಸಾಮಾನ್ಯ ಅನುಮೋದನೆಗಳ ಪಟ್ಟಿಗಳ ಬಗ್ಗೆಯೂ ಚರ್ಚಿಸಲಾಗಿದೆ.




ಮುಂದಿನ ಐದು ವರ್ಷಗಳಲ್ಲಿ ಪ್ಲಾಸ್ಟಿಕ್ ವ್ಯಾಪಾರವನ್ನು ಹತ್ತು ಲಕ್ಷ ಕೋಟಿ ಉದ್ಯಮವನ್ನಾಗಿ ಮಾಡಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಖಾತೆ ಸಚಿವ ಭಾನು ಪ್ರತಾಪ್ ಸಿಂಗ್ ವರ್ಮಾ ಹೇಳಿದ್ದಾರೆ. ನವದೆಹಲಿಯಲ್ಲಿ ಪ್ಲಾಸ್ಟಿಕ್ ಮರುಬಳಕೆ ಮತ್ತು ತ್ಯಾಜ್ಯ ನಿರ್ವಹಣೆ ಕುರಿತು ಅಂತರರಾಷ್ಟ್ರೀಯ ಶೃಂಗಸಭೆ 2022 ಅನ್ನು ಉದ್ಘಾಟಿಸಿದ ಅವರು, ಈ ಸಾಧನೆ MSME ವಲಯದ ಸಹಾಯದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಭಾರತವು ಪ್ಲಾಸ್ಟಿಕ್ ಉದ್ಯಮದ ಬೆಳೆಯುತ್ತಿರುವ ಮಾರುಕಟ್ಟೆಯಾಗಿದ್ದು, 2030 ರ ಅಂತ್ಯದ ವೇಳೆಗೆ ದೇಶದಲ್ಲಿ ಇದರ ಬಳಕೆಯು 30 ಮಿಲಿಯನ್ ಟನ್ ಆಗಲಿದೆ ಎಂದು ಅವರು ಹೇಳಿದರು. ದೇಶದಲ್ಲಿ ಶೇ 95ರಷ್ಟು ಪ್ಲಾಸ್ಟಿಕ್ ಉತ್ಪಾದನಾ ಘಟಕಗಳು ಎಂಎಸ್‌ಎಂಇ ವಲಯದಲ್ಲಿದ್ದು, ಸರ್ಕಾರವು ವಿವಿಧ ಉಪಕ್ರಮಗಳ ಮೂಲಕ ಅವುಗಳಿಗೆ ನೆರವು ನೀಡುತ್ತಿದೆ ಎಂದು ಹೇಳಿದರು.

ದೇಶದಲ್ಲಿ ನಾಲ್ಕು ಸಾವಿರ ಅಸಂಘಟಿತ ಮರುಬಳಕೆ ಘಟಕಗಳ ಜೊತೆಗೆ 3500 ಆಧುನಿಕ ಪ್ಲಾಸ್ಟಿಕ್ ಮರುಬಳಕೆ ಘಟಕಗಳಿವೆ ಎಂದು ಸಚಿವರು ಹೇಳಿದರು. ಮೇಕ್ ಇನ್ ಇಂಡಿಯಾ ಉಪಕ್ರಮದಲ್ಲಿ ಪ್ಲಾಸ್ಟಿಕ್ ಉದ್ಯಮವು ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಅವರು ಹೇಳಿದರು. ಎಂಎಸ್‌ಎಂಇಗಳ ಪರಿಣಾಮ ಮತ್ತು ಸಂಭವನೀಯ ಪರಿಹಾರಗಳನ್ನು ಚರ್ಚಿಸಲು ಮತ್ತು ಪ್ಲಾಸ್ಟಿಕ್ ಉದ್ಯಮದಲ್ಲಿ ಹೊಸ ವ್ಯಾಪಾರ ಅವಕಾಶಗಳನ್ನು ತೆರೆಯಲು ಪಾಲುದಾರರು ಮತ್ತು ತಜ್ಞರನ್ನು ಕರೆತರಲು ಶೃಂಗಸಭೆಯು ಪರಿಣಾಮಕಾರಿ ವೇದಿಕೆಯಾಗಿದೆ ಎಂದು ವರ್ಮಾ ಹೇಳಿದರು.

ಹಿಜಾಬ್ ಪ್ರಕರಣದ ವಿಚಾರಣೆ ನಡೆಸುತ್ತಿರುವ ಕರ್ನಾಟಕ ಹೈಕೋರ್ಟ್ ಬುಧವಾರ ಇಡೀ ಪ್ರಕರಣದಲ್ಲಿ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಪಾತ್ರದ ಬಗ್ಗೆ ರಾಜ್ಯ ಸರ್ಕಾರದಿಂದ ಮಾಹಿತಿ ಕೇಳಿದೆ.

ಜನವರಿ 1ರಂದು ಕಾಲೇಜುಗಳಲ್ಲಿ ಹಿಜಾಬ್ ಹಾಕಲು ಅವಕಾಶ ನೀಡದೇ ಇರುವುದನ್ನು ಖಂಡಿಸಿ ಸಿಎಫ್‌ಐ ಪತ್ರಿಕಾಗೋಷ್ಠಿ ನಡೆಸಿದ್ದು ಇದರಲ್ಲಿ ಉಡುಪಿ ಕಾಲೇಜಿನ ಆರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಇದಾದ ನಾಲ್ಕು ದಿನಗಳ ನಂತರ ಈ ವಿದ್ಯಾರ್ಥಿನಿಯರು ತರಗತಿಗಳಲ್ಲಿ ಹಿಜಾಬ್ ಧರಿಸಲು ಅನುಮತಿಯನ್ನು ಕೋರಿದ್ದರು. ಆದರೆ ಕಾಲೇಜಿನಲ್ಲಿ ಅದಕ್ಕೂ






ಮೊದಲು ಅವಕಾಶವಿರಲಿಲ್ಲ, ಈಗಲೂ ಅವಕಾಶ ನೀಡುವುದಿಲ್ಲ ಎಂದು ಪ್ರಾಂಶುಪಾಲರು ಹೇಳಿದ್ದಾರೆ. ಅಲ್ಲಿಯವರೆಗೆ ವಿದ್ಯಾರ್ಥಿಗಳು ಸ್ಕಾರ್ಫ್ ಧರಿಸಿ ಕ್ಯಾಂಪಸ್‌ಗೆ ಬರುತ್ತಿದ್ದರು ಆದರೆ ಅದನ್ನು ತೆಗೆದು ತರಗತಿಗೆ ಪ್ರವೇಶಿಸುತ್ತಿದ್ದರು ಎಂದು ಕಾಲೇಜು ಪ್ರಾಂಶುಪಾಲ ರುದ್ರೇಗೌಡ ಹೇಳಿದ್ದಾರೆ.

'ಕಳೆದ 35 ವರ್ಷಗಳಲ್ಲಿ ಯಾರೂ ತರಗತಿಗೆ ಹಿಜಾಬ್ ಧರಿಸದ ಕಾರಣ ಸಂಸ್ಥೆಯು ಹಿಜಾಬ್ ಧರಿಸುವುದರ ಬಗ್ಗೆ ಯಾವುದೇ ನಿಯಮವನ್ನು ಹೊಂದಿಲ್ಲ. ಬೇಡಿಕೆಯೊಂದಿಗೆ ಬಂದ ವಿದ್ಯಾರ್ಥಿಗಳಿಗೆ ಹೊರಗಿನ ಶಕ್ತಿಗಳ ಬೆಂಬಲವಿದೆ" ಎಂದು ಹೇಳಿದ್ದಾರೆ. CFIಗೆ ನಿಷ್ಠರಾಗಿರುವ ವಿದ್ಯಾರ್ಥಿಗಳು ಹಿಜಾಬ್ ವಿವಾದ ಹುಟ್ಟು ಹಾಕಿದ್ದಾರೆ ಎಂದು ಬಾಲಕಿಯರ ಸರ್ಕಾರಿ ಪಿಯು ಕಾಲೇಜು, ಅದರ ಪ್ರಾಂಶುಪಾಲರು ಮತ್ತು ಶಿಕ್ಷಕರನ್ನು ಪ್ರತಿನಿಧಿಸುವ ಹಿರಿಯ ವಕೀಲ ಎಸ್‌ಎಸ್ ನಾಗಾನಂದ್ ಅವರು ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ, ನ್ಯಾಯಮೂರ್ತಿ ಜೆಎಂ ಖಾಜಿ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರನ್ನೊಳಗೊಂಡ ಪೂರ್ಣ ಪೀಠಕ್ಕೆ ಬುಧವಾರ ಹೇಳಿದ್ದಾರೆ.

ಇದಕ್ಕೆ ಮುಖ್ಯ ನ್ಯಾಯಮೂರ್ತಿಗಳು ಸಿಎಫ್‌ಐ ಏನನ್ನು ಪ್ರತಿನಿಧಿಸುತ್ತದೆ ಮತ್ತು ಅದರ ಪಾತ್ರವೇನು ಎಂದು ತಿಳಿಯಲು ಪ್ರಯತ್ನಿಸಿದರು. ಸಂಘಟನೆಯು ರಾಜ್ಯದಲ್ಲಿ ಪ್ರತಿಭಟನೆಗಳನ್ನು ಸಂಘಟಿಸುತ್ತಿದೆ ಎಂದು ಹಿರಿಯ ವಕೀಲರು ತಿಳಿಸಿದರು. 'ಇದೊಂದು ಸ್ವಯಂಸೇವಾ ಸಂಸ್ಥೆಯೂ ಆಗಿದೆ, ಇದು ವಿದ್ಯಾರ್ಥಿನಿಯರ ಪರವಾಗಿ ಹಿಜಾಬ್ ಹೋರಾಟದಲ್ಲಿ ಮುಂಚೂಣಿಯಲ್ಲಿದೆ' ಎಂದಿದಾರೆ. ಮತ್ತೊಬ್ಬ ವಕೀಲರು 'ಸಿಎಫ್‌ಐ ಮೂಲಭೂತವಾದಿ ಸಂಘಟನೆಯಾಗಿದ್ದು, ಇದನ್ನು ಕಾಲೇಜುಗಳು ಗುರುತಿಸಿಲ್ಲ' ಎಂದಿದ್ದಾರೆ. ಬಳಿಕ ಸಿಎಫ್‌ಐ ಪಾತ್ರದ ಬಗ್ಗೆ ಮಾಹಿತಿ ನೀಡುವಂತೆ ಸರ್ಕಾರಕ್ಕೆ ಮುಖ್ಯ ನಾಯಮೂರ್ತಿಗಳು ಸೂಚನೆ ನೀಡಿದರು.

ರೈಲು ಅಪಘಾತಗಳನ್ನು ತಪ್ಪಿಸಲು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ವ್ಯವಸ್ಥೆಯನ್ನು ಪರಿಶೀಲಿಸಲು ಭಾರತೀಯ ರೈಲ್ವೇ ನಡೆಸಿದ 'ಕವಚ' ಸಿಸ್ಟಂ ಪರೀಕ್ಷೆ ಯಶಸ್ವಿಯಾಗಿದೆ ಎಂದು ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಘೋಷಿಸಿದ್ದಾರೆ. ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ಸ್ವಯಂಚಾಲಿತ ರೈಲು ರಕ್ಷಣೆ (ATP) ವ್ಯವಸ್ಥೆಯಾದ 'ಕವಚ್' ಶೂನ್ಯ ಅಪಘಾತಗಳ ಗುರಿ ಸಾಧನೆಯ ಹಾದಿಯಲ್ಲಿ ರೈಲ್ವೇಗಳಿಗೆ ಸಹಾಯ ಮಾಡಲು ವಿನ್ಯಾಸಗೊಳಿಸಲಾಗಿದೆ.

ಇತರ ಲೋಕೋಮೋಟಿವ್‌ಗಳಿಗೆ ಹೋಲಿಸಿದರೆ ಕವಚ್ ಮುಂಭಾಗದಲ್ಲಿ 380 ಮೀಟರ್‌ಗಳ ಮೊದಲು ಸ್ವಯಂಚಾಲಿತವಾಗಿ ರೈಲನ್ನು ನಿಲ್ಲಿಸಿದೆ. ಈ ಪರೀಕ್ಷೆಯು ಎರಡು ರೈಲುಗಳನ್ನು ಒಳಗೊಂಡಿತ್ತು – ಒಂದು ರೈಲಿನಲ್ಲಿ ರೈಲ್ವೇ ಸಚಿವರು ಇದ್ದರು ಮತ್ತು ಇನ್ನೊಂದು ರೈಲಿನಲ್ಲಿ ರೈಲ್ವೇ ಮಂಡಳಿಯ ಅಧ್ಯಕ್ಷರು ಇದ್ದರು. ಈ ಎರಡು ರೈಲುಗಳು ಪೂರ್ಣ ವೇಗದಲ್ಲಿ ಒಂದಕ್ಕೊಂದು ಹಾದು ಹೋಗಿವೆ. ಆದರೆ ಎರಡೂ ರೈಲುಗಳು 380 ಮೀಟರ್ ಅಂತರದಲ್ಲಿ ನಿಂತುಕೊಂಡಿವೆ. ಕವಚ್ ವಿಶ್ವದ ಅಗ್ಗದ ಸ್ವಯಂಚಾಲಿತ ರೈಲು ಡಿಕ್ಕಿ ರಕ್ಷಣೆ ವ್ಯವಸ್ಥೆಯಾಗಲಿದೆ.

ಒಮ್ಮೆ ಜಾರಿಗೆ ಬಂದರೆ ಪ್ರತಿ ಕಿಲೋಮೀಟರ್‌ಗೆ ಕಾರ್ಯಾಚರಣೆಗೆ 50 ಲಕ್ಷ ರೂಪಾಯಿ ವೆಚ್ಚವಾಗಲಿದೆ ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ವಿಶ್ವಾದ್ಯಂತ ತಗಲುವ ಸುಮಾರು 2 ಕೋಟಿ ರೂಪಾಯಿಗಳಿಗೆ ಹೋಲಿಸಿದರೆ ಇದು ಅಗ್ಗದ ವ್ಯವಸ್ಥೆಯಾಗಿದೆ.

Date of Publication 10th MARCH 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-03-2022

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಇದುವರೆಗೆ ಉಕ್ರೇನ್‌ನಿಂದ 11,000 ಭಾರತೀಯ ಪ್ರಜೆಗಳ ಸ್ಥಳಾಂತರ

ಆಪರೇಷನ್ ಗಂಗಾ ಶರವೇಗದಲ್ಲಿ ಮುಂದುವರೆಯುತ್ತಿದ್ದು, ಇದುವರೆಗೆ 11,000 ಕ್ಕೂ ಹೆಚ್ಚು ಭಾರತೀಯ ಪ್ರಜೆಗಳನ್ನು ಯುದ್ಧ ಪೀಡಿತ ಉಕ್ರೇನ್ನಿಂದ ಸ್ಥಳಾಂತರಿಸಲಾಗಿದೆ. ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ ಅವರು "ಆಪರೇಷನ್ ಗಂಗಾಗೆ ನಿರಂತರ ಬೆಂಬಲ ನೀಡುತ್ತಿರುವ ಭಾರತೀಯ ಮಿಷನ್‌ಗಳು, ವಿದೇಶಿ ಸರ್ಕಾರಗಳು ಮತ್ತು ಸ್ವಯಂಸೇವಕರಿಗೆ ಧನ್ಯವಾದ" ತಿಳಿಸಿದ್ದಾರೆ.

ಇದುವರೆಗೆ 20 ಸಾವಿರಕ್ಕೂ ಹೆಚ್ಚು ಭಾರತೀಯರು ಉಕ್ರೇನ್‌ನ ಗಡಿಯನ್ನು ತೊರೆದಿದ್ದಾರೆ. ಕಳೆದ 24 ಗಂಟೆಗಳಲ್ಲಿ ಸುಮಾರು ನಾಲ್ಕು ಸಾವಿರ ಭಾರತೀಯರನ್ನು ಹೊತ್ತು 18 ವಿಮಾನಗಳು ಭಾರತಕ್ಕೆ ಬಂದಿಳಿದಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕೃತ ವಕ್ತಾರ ಅರಿಂದಮ್ ಬಾಗ್ಚಿ ಶುಕ್ರವಾರ ಹೇಳಿದ್ದಾರೆ. ಉಕ್ರೇನಿನ ನೆರೆಯ ದೇಶಗಳಿಂದ ಇದುವರೆಗೆ ಒಟ್ಟು 48 ವಿಮಾನಗಳು ಬಂದಿಳಿದಿವೆ ಎಂದು ಅವರು ಹೇಳಿದ್ದು. ನಾಲ್ಕು ಐಎಎಫ್‌ನ ಸಿ–17 ವಿಮಾನಗಳು ಸೇರಿದಂತೆ ಮುಂದಿನ 24 ಗಂಟೆಗಳ ಕಾಲ 16 ವಿಮಾನಗಳನ್ನು ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಉಕ್ರೇನ್‌ನಿಂದ ಪ್ರತಿಯೊಬ್ಬ ಭಾರತೀಯನನ್ನು ಸ್ಥಳಾಂತರಿಸುವವರೆಗೆ ವಿಮಾನಗಳು ಕಾರ್ಯನಿರ್ವಹಿಸುತ್ತವೆ ಎಂದು ಭರವಸೆ ನೀಡಿದ ಅವರು, ವಿಶೇಷ ವಿಮಾನಗಳ ಕಾರ್ಯಾಚರಣೆಯೊಂದಿಗೆ ಉಕ್ರೇನ್‌ನ ಗಡಿ ದಾಟಿದ ಬಹುಪಾಲು ಭಾರತೀಯರು ಭಾರತಕ್ಕೆ ಮರಳುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸ್ಥಳಾಂತರಿಸುವ ಕಾರ್ಯಾಚರಣೆಯ ಕುರಿತು ಮಾತನಾಡಿದ ಅವರು, ಉಕ್ರೇನ್‌ನ ಪೂರ್ವ ಭಾಗದಲ್ಲಿ ವಿಶೇಷವಾಗಿ ಖಾರ್ಕಿವ್ ಮತ್ತು ಪಿಸೊಚಿನ್ನಲ್ಲಿ ಹೆಚ್ಚಿನ ಗಮನವನ್ನು ನೀಡಲಾಗಿದೆ. ಉಕ್ರೇನ್‌ನಲ್ಲಿರುವ ಭಾರತೀಯ ಮಿಷನ್ ಅಲ್ಲಿಗೆ ಕೆಲವು ಬಸ್‌ಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿದೆ. ಖಾರ್ಕಿವ್‌ನಲ್ಲಿ ಸುಮಾರು 300 ಭಾರತೀಯರು, ಪಿಸೋಚಿನ್ನಲ್ಲಿ 900 ಮತ್ತು ಸುಮಿಯಲ್ಲಿ 700ಕ್ಕೂ ಹೆಚ್ಚು ಭಾರತೀಯರು ಸಿಕ್ಕಿಬಿದ್ದಿದ್ದಾರೆ ಎಂದು ಅವರು ಹೇಳಿದ್ದಾರೆ.




## ಸಮಗ್ರ ಯೋಜನೆಗಳ ರಾಜ್ಯ ಬಜೆಟ್ ಮಂಡನೆ




ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಬಜೆಟ್ ಮಂಡನೆ ಮಾಡಿದ್ದಾರೆ. ಕೃಷಿ ಕ್ಷೇತ್ರಕ್ಕೆ 33,700 ಕೋಟಿ ರೂಪಾಯಿ ಘೋಷಣೆ ಮಾಡಿದ ಬಿ.ಎಸ್. ಬಸವರಾಜ ಬೊಮ್ಮಾಯಿ ಅವರು, ರೈತ ಶಕ್ತಿ ಹೊಸ ಯೋಜನೆಯನ್ನು ಘೋಷಿಸಿದರು.

ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿಗೆ 68,479 ಕೋಟಿ ರೂ ಮೀಸಲಿಡಲಾಗಿದೆ. ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡಲು 55,657 ಕೋಟಿ ರೂ. ಮೀಸಲಿಡಲಾಗಿದೆ. ಬೆಂಗಳೂರು ಸಮಗ್ರ ಅಭಿವೃದ್ಧಿಗೆ 8,409 ಕೋಟಿ ರೂ. ಮೀಸಲಿಡಲಾಗಿದೆ. ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ 3,102 ಕೋಟಿ ರೂ. ರೂಪಾಯಿ ಮೀಸಲಿಡಲಾಗಿದೆ. ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆಗೆ 56,710 ಕೋಟಿ ರೂ. ಮೀಸಲಿಡಲಾಗಿದೆ. ಮಹಿಳೆಯರ ಸಬಲೀಕರಣ ಹಾಗೂ ಕ್ಷೇಮಾಭಿವೃದ್ಧಿಗೆ ಆಯವ್ಯಯದಲ್ಲಿ ಒದಗಿಸಿದ ಅನುದಾನ 43,188 ಕೋಟಿ ರೂ. ಆಗಿದೆ. ಮಕ್ಕಳ ಅಭ್ಯುದಯಕ್ಕೆ ಆಯವ್ಯಯದಲ್ಲಿ ಒದಗಿಸಿದ ಅನುದಾನ 40,944 ಕೋಟಿ ರೂ. ಆಗಿದೆ.

'ಎಲ್ಲರಿಗೂ ಆರೋಗ್ಯ, ಎಲ್ಲೆಡೆ ಆರೋಗ್ಯ' ಎಂಬ ಧ್ಯೇಯದೊಂದಿಗೆ ಆರೋಗ್ಯ ಕ್ಷೇತ್ರಕ್ಕೆ ಸಿಎಂ ಬೊಮ್ಮಾಯಿ ಅನೇಕ ಕೊಡುಗೆ ಘೋಷಿಸಿದ್ದಾರೆ. ಬೆಂಗಳೂರಿನ ಎಲ್ಲ ವಾರ್ಡ್‌ಗಳಲ್ಲಿ ಹಾಗೂ ಪ್ರಮುಖ ನಗರಗಳಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆಗಾಗಿ 438 'ನಮ್ಮ ಕ್ಲಿನಿಕ್'ಗಳ ಸ್ಥಾಪನೆ, 300 ಮಹಿಳಾ ಸ್ವಾಸ್ಥ್ಯ ಕೇಂದ್ರಗಳ ಸ್ಥಾಪನೆ, ಬಡ–ಹಿರಿಯ ನಾಗರಿಕರಿಗೆ ಉಚಿತ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ ಹಾಗೂ ಕನ್ನಡಕ ಸೌಲಭ್ಯ, ಏಳು ತಾಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳಾಗಿ ಮೇಲ್ದರ್ಜೆಗೆ ಏರಿಕೆ, ತುಮಕೂರಿನಲ್ಲಿ 20 ಕೋಟಿ ರೂಪಾಯಿ ವೆಚ್ಚದಲ್ಲಿ ಟ್ರಾಮಾ ಕೇರ್ ಕೇಂದ್ರ, ಬೆಳಗಾವಿಯಲ್ಲಿ 50 ಕೋಟಿ ರೂಪಾಯಿ ವೆಚ್ಚದಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ, ಚಿತ್ರದುರ್ಗದಲ್ಲಿ ಹೊಸ ವೈದ್ಯಕೀಯ ಕಾಲೇಜು ಸ್ಥಾಪನೆ ಘೋಷಣೆಯಾಗಿದೆ.

ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ಮೇಕೆದಾಟು ಯೋಜನೆ ಹಾಗೂ ಕಳಸಾ ಬಂಡೂರಿ ಯೋಜನೆಗಳಿಗೆ ತಲಾ 1 ಸಾವಿರ ಕೋಟಿ ರುಪಾಯಿ ಅನುದಾನ ಘೋಷಿಸಲಾಗಿದೆ. ಇನ್ನುಳಿದಂತೆ ಕಾಳಿ ನದಿಯಿಂದ ಕುಡಿಯುವ ನೀರು ಪೂರೈಕೆ ಯೋಜನೆ ಅನುಷ್ಠಾನಕ್ಕೆ ತರಲಿದ್ದು, ಇದರಿಂದ ಉತ್ತರ ಕರ್ನಾಟಕದ 5 ಜಿಲ್ಲೆಗಳಿಗೆ ನೀರು ಪೂರೈಕೆಯಾಗಲಿದೆ.

## ಹೊಸ ಹೆದ್ದಾರಿಗಳಿಗೆ ನಿತಿನ್ ಗಡ್ಕರಿ ಶಂಕುಸ್ಥಾಪನೆ



ಕಿತ್ತೂರಿನಿಂದ ಬೆಳಗಾವಿ ಮೂಲಕ ಮಹಾರಾಷ್ಟ್ರ ಗಡಿಯವರೆಗಿನ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸಂಪೂರ್ಣವಾಗಿ ಜಲಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಬೆಳಗಾವಿ ಜಿಲ್ಲೆಯಿಂದ ಆರಂಭಿಸಲಾಗುವ ಈ ಯೋಜನೆಯನ್ನು ಮುಂಬರುವ ದಿನಗಳಲ್ಲಿ ಇಡೀ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದರು. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಇಲಾಖೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಫೆಬ್ರವರಿ 28ರಂದು ನಡೆದ ಒಟ್ಟು 3972 ಕೋಟಿ ರೂಪಾಯಿ ವೆಚ್ಚದ 238 ಕಿ.ಮೀ. ಉದ್ದದ ಐದು ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಶಂಕುಸ್ಥಾಪನೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೆಳಗಾವಿ ಸೇರಿದಂತೆ ರಾಜ್ಯದ ಇತರ ಕಡೆಯ ರಿಂಗ್ ರಸ್ತೆಯನ್ನು ಆದಷ್ಟು ಬೇಗನೇ ಪೂರ್ಣಗೊಳಿಸಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಸಿಎಂ ಬೊಮ್ಮಾಯಿ ಮನವಿ ಮಾಡಿಕೊಂಡರು. ಮಹಾರಾಷ್ಟ್ರದ ಕಾರ್ಮಿಕ ಸ್ಥಳಗಳಾದ ಪಂಢರಾಪುರ, ಶಿರಡಿ ಮತ್ತಿತರ ಧಾರ್ಮಿಕ ಸ್ಥಳಗಳನ್ನು ಕರ್ನಾಟಕ ರಾಜ್ಯದ ಧಾರ್ಮಿಕ ಸ್ಥಳಗಳ ಜತೆ ಜೋಡಿಸಲು ವಿನೂತನ ಯೋಜನೆಯನ್ನು ನಿತಿನ್ ಗಡ್ಕರಿ ಅವರು ರೂಪಿಸಿದ್ದಾರೆ.

ಐದು ಯೋಜನೆಗಳಿಗೆ ಶಂಕುಸ್ಥಾಪನೆ: ಬೆಳಗಾವಿ–ಸಂಕೇಶ್ವರ ಬೈಪಾಸ್, ಸಂಕೇಶ್ವರ ಬೈಪಾಸ್–ಮಹಾರಾಷ್ಟ್ರ ಗಡಿಯವರೆಗೆ ಷಟ್ಪಥ ನಿರ್ಮಾಣ ಕಾಮಗಾರಿ; ಚೋರ್ಲಾ–ಜಾಂಬೋಟಿ–ಬೆಳಗಾವಿ ನಡುವಿನ ದ್ವಿಪಥ ಕಾಮಗಾರಿಗಳು; ಇದೇ ರೀತಿ ವಿಜಯಪುರ–ಮುರಗುಂಡಿ(ಎನ್.ಎಚ್.548ಬಿ) ಹಾಗೂ ಸಿದ್ದಾಪುರ–ವಿಜಯಪುರ(ಎನ್.ಎಚ್.561ಎ) ಕಾಮಗಾರಿಗಳಿಗೆ ಕೇಂದ್ರ ಕೇಂದ್ರ ರಸ್ತೆ ಸಾರಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಸಚಿವರಾದ ನಿತಿನ್ ಗಡ್ಕರಿ ಅವರು ಶಂಕುಸ್ಥಾಪನೆ ನೆರವೇರಿಸಿದರು.

## 2013–14 ರಿಂದ 88% ರಷ್ಟು ಜಿಗಿತ ಕಂಡ ಎಲೆಕ್ಟ್ರಾನಿಕ್ ಸರಕುಗಳ ರಫ್ತು

ಭಾರತದ ಎಲೆಕ್ಟ್ರಾನಿಕ್ ಸರಕುಗಳ ರಫ್ತು 2013–14 ರಲ್ಲಿ 6,600 ಮಿಲಿಯನ್ ಡಾಲರ್‌ಗಳಿಂದ 2021–22 ರಲ್ಲಿ 12,400 ಮಿಲಿಯನ್‌ಗೆ ಸುಮಾರು 88 ಶೇಕಡಾ ಏರಿಕೆಯಾಗಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಮೊಬೈಲ್ ಫೋನ್‌ಗಳು, ಐಟಿ ಹಾರ್ಡ್‌ವೇರ್, ಕನ್ಸ್ಯೂಮರ್ ಎಲೆಕ್ಟ್ರಾನಿಕ್ಸ್, ಇಂಡಸ್ಟ್ರಿಯಲ್ ಎಲೆಕ್ಟ್ರಾನಿಕ್ಸ್ ಮತ್ತು ಆಟೋ ಎಲೆಕ್ಟ್ರಾನಿಕ್ಸ್ ಈ ವಲಯದಲ್ಲಿ ಪ್ರಮುಖ ರಫ್ತುಗಳಾಗಿವೆ.

ಸರ್ಕಾರದ ಉಪಕ್ರಮಗಳು ಗುಣಮಟ್ಟದ ಮತ್ತು ಜಾಗತಿಕವಾಗಿ ಸ್ಪರ್ಧಾತ್ಮಕ ಉತ್ಪನ್ನಗಳ ದೇಶೀಯ ಉತ್ಪಾದನೆಯನ್ನು ಉತ್ತೇಜಿಸುತ್ತಿವೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಎಲೆಕ್ಟ್ರಾನಿಕ್ಸ್‌ನ ರಾಷ್ಟ್ರೀಯ ನೀತಿ – 2019 ದೇಶದಲ್ಲಿ ಸಾಮರ್ಥ್ಯಗಳನ್ನು ಉತ್ತೇಜಿಸುವ ಮೂಲಕ ಎಲೆಕ್ಟ್ರಾನಿಕ್ಸ್ ಸಿಸ್ಟಮ್ ವಿನ್ಯಾಸ ಮತ್ತು ಉತ್ಪಾದನೆಗೆ ಭಾರತವನ್ನು ಜಾಗತಿಕ ಕೇಂದ್ರವಾಗಿ ಇರಿಸುವ ಗುರಿಯನ್ನು ಹೊಂದಿದೆ. ಭಾರತವು ರಫ್ತಿನಲ್ಲಿ ಸ್ಥಿರವಾದ ಬೆಳವಣಿಗೆಯನ್ನು ಕಾಣಲು ಇದು ಸಹಕಾರಿಯಾಗುತ್ತಿದೆ.



ರಫ್ತು ವಲಯವು ವಿಶೇಷವಾಗಿ ಸಾಂಕ್ರಾಮಿಕ ಸಮಯದಲ್ಲಿ ಎದುರಾದ ಅಡೆತಡೆಗಳು, ನಿರ್ಬಂಧಗಳು ಮತ್ತು ಅಡಚಣೆಗಳನ್ನು ತೆಗೆದುಹಾಕುವಲ್ಲಿ ಸಹಾಯ ಮಾಡಲು ರಫ್ತು ಮಾನಿಟರಿಂಗ್ ಡೆಸ್ಕ್ ಅನ್ನು ಸ್ಥಾಪಿಸಲಾಗಿದೆ. ಹಲವಾರು ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ಶ್ರದ್ಧೆಯಿಂದ ಅನುಸರಿಸಲಾಗುತ್ತಿದೆ. ಒಂದು ಜಿಲ್ಲೆ ಒಂದು ಉತ್ಪನ್ನದಂತಹ ಪ್ರಯತ್ನಗಳ ಮೂಲಕ, ಭಾರತದಲ್ಲಿ ಪ್ರತಿ ಜಿಲ್ಲೆಯನ್ನು ರಫ್ತು ಶಕ್ತಿ ಕೇಂದ್ರವನ್ನಾಗಿ ಮಾಡಲು ಸರ್ಕಾರವು ಬದ್ಧತೆ ತೋರಿಸುತ್ತಿದೆ.

ರಫ್ತುದಾರರಿಗೆ ಪರವಾನಗಿ ನೀಡಲು ಮತ್ತು ಅವರ ದೂರುಗಳನ್ನು ನಿರ್ವಹಿಸಲು ಐಟಿ ಆಧಾರಿತ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ವಿಶ್ವಾಸಾರ್ಹ ಪೂರೈಕೆದಾರರಾಗಿ ಭಾರತದ ಜಾಗತಿಕ ಖ್ಯಾತಿಯನ್ನು ಸುಧಾರಿಸುವ ಸಲುವಾಗಿ ಭಾರತೀಯ ರಫ್ತು ಬ್ರ್ಯಾಂಡಿಂಗ್‌ನ ಮೌಲ್ಯವನ್ನು ಬಲಪಡಿಸಲು ಸರ್ಕಾರವು ಶ್ರಮಿಸುತ್ತಿದೆ, ಜೊತೆಗೆ ದೇಶವನ್ನು ಜಾಗತಿಕ ಮೌಲ್ಯ ಸರಪಳಿಯೊಂದಿಗೆ ಜೋಡಿಸಲು ಆಕ್ರಮಣಕಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.